# National
# Kannada
# 24.12.2025 19.35 hrs
## ಆಕಾಶವಾಣಿ, ಬೆಂಗಳೂರು

## ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

1. ಅರಾವಳಿ ಬೆಟ್ಟಗಳ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು, ಪರಿಸರ ಸ್ನೇಹಿಯಾಗಿದ್ದು, ಭವಿಷ್ಯದ ಸುಸ್ಥಿರತೆಗೆ ಅನುಗುಣವಾಗಿದೆ – ಕೇಂದ್ರ ಸಚಿವ ಭೂಪೇಂದ್ರ ಯಾದವ್
2. 12 ಸಾವಿರದ 15 ಕೋಟಿ ರೂಪಾಯಿಗಳ ದೆಹಲಿ ಮೆಟ್ರೋದ 5ಎ ಹಂತಕ್ಕೆ ಅನುಮೋದನೆ ನೀಡಿದ ಕೇಂದ್ರ ಸಚಿವ ಸಂಪುಟ
3. ಸಹಕಾರದ ಮೂಲಕ ಸಮೃದ್ಧಿ ಸಾಧಿಸಲು ಪಶುಸಂಗೋಪನೆ, ಕೃಷಿ ಮತ್ತು ಸಹಕಾರಿ ಸಂಸ್ಥೆಗಳ ಸಂಯೋಜನೆ ಅತ್ಯಗತ್ಯ – ಕೇಂದ್ರ ಸಚಿವ ಅಮಿತ್ ಶಾ
4. ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್; ಮೊದಲ ಪಂದ್ಯದಲ್ಲಿ ಜಾರ್ಖಂಡ್ ವಿರುದ್ಧ ಜಯಗಳಿಸಿದ ಕರ್ನಾಟಕ ತಂಡ

***************

ಅರಾವಳಿ ಬೆಟ್ಟಗಳ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಕುರಿತು, ಕೆಲವು ರಾಜಕೀಯ ಪಕ್ಷಗಳು, ವಿಶೇಷವಾಗಿ ಕಾಂಗ್ರೆಸ್ ತಪ್ಪು ಮಾಹಿತಿಯನ್ನು ಹರಡುತ್ತಿವೆ ಎಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಖಾತೆ ಸಚಿವ ಭೂಪೇಂದರ್ ಯಾದವ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ತೀರ್ಪನ್ನು ಉದ್ದೇಶಪೂರ್ವಕವಾಗಿ ತಪ್ಪಾಗಿ ಅರ್ಥೈಸಿಕೊಳ್ಳುತ್ತಿರುವ ಈ ಪಕ್ಷಗಳು, ಅದನ್ನು ತಮ್ಮ ಹಿತಾಸಕ್ತಿಗಳನ್ನು ಪೂರೈಸಲು ರಾಜಕೀಯ ಸಾಧನವಾಗಿ ಬಳಸುತ್ತಿದ್ದಾರೆ ಎಂದರು.

ಯಾವುದೇ ಅಭಿವೃದ್ಧಿ ಪರಿಕಲ್ಪನೆಯು ಸುಸ್ಥಿರತೆಯನ್ನು ಆಧರಿಸಿರಬೇಕು ಎಂಬುದು ಒಂದು ದೊಡ್ಡ ಸಮಸ್ಯೆಯಾಗಿದೆ. ಆದ್ದರಿಂದ ಸುಪ್ರೀಂ ಕೋರ್ಟ್ ಯಾವುದೇ ಗಣಿಗಾರಿಕೆ ಹಕ್ಕುಗಳನ್ನು ನೀಡಬೇಕಾದರೆ, ಸುಸ್ಥಿರತೆಯನ್ನು ನಿರ್ಧರಿಸಬೇಕಾಗುತ್ತದೆ ಎಂದು ಆಕಾಶವಾಣಿ ವಾರ್ತೆಗಳಿಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಅವರು ಹೇಳಿದರು.

ದೇಶದ ಅಗತ್ಯಗಳಿಗೆ ಅನುಗುಣವಾಗಿ, ಅರಾವಳಿ ಪ್ರದೇಶದಲ್ಲಿ ಯುರೇನಿಯಂ, ತಾಮ್ರದಂತಹ ಹಲವಾರು ಕಾರ್ಯತಂತ್ರದ ನಿರ್ಣಾಯಕ ಖನಿಜಗಳ ಗಣಿಗಳು ಸಾಕಷ್ಟಿವೆ. ಅಲ್ಲಿಂದ ನಾವು ಖನಿಜಗಳನ್ನು ಹೊರತೆಗೆಯುತ್ತಿದ್ದೇವೆ. ಆದರೆ ಭೂಮಿ ತಾಯಿಯ ಸಂಪನ್ಮೂಲಗಳ ಪುನಃಸ್ಥಾಪನೆಗಾಗಿ ನಾವು ಏನು ಮಾಡುತ್ತಿದ್ದೇವೆ ಎಂಬುದು ಪ್ರಶ್ನಾರ್ಹ.

ಯಾರಾದರೂ ಗಣಿಗಾರಿಕೆ ಹಕ್ಕುಗಳನ್ನು ಪಡೆದರೆ, ಮೊದಲು ಅವರು ತಮ್ಮ ಪುನಃಸ್ಥಾಪನೆ ಯೋಜನೆಯನ್ನು ಸಲ್ಲಿಸಬೇಕಾಗುತ್ತದೆ. ಯಾರಾದರೂ ಅವರ ಸ್ವಂತ ಲಾಭಕ್ಕಾಗಿ ಗಣಿಗಳನ್ನು ಹೊರತೆಗೆದಿದ್ದರೆ, ನಂತರ ಅವರು ಗಣಿಗಳನ್ನು ಪುನಃಸ್ಥಾಪಿಸಿ ಅವುಗಳನ್ನು ಹಿಂತಿರುಗಿಸಬೇಕು. ಆದ್ದರಿಂದ ಸುಪ್ರೀಂ ಕೋರ್ಟಿನ ಈ ನಿರ್ಧಾರವು ಪರಿಸರ ಸ್ನೇಹಿಯಾಗಿದ್ದು, ಭವಿಷ್ಯದ ಸುಸ್ಥಿರತೆಗೆ ಅನುಗುಣವಾಗಿದೆ ಎಂದರು.

ಕಾಂಗ್ರೆಸ್ ಈ ವಿಷಯದಲ್ಲಿ ಸುಳ್ಳು ಸುದ್ದಿ ಮತ್ತು ಗೊಂದಲವನ್ನು ಹರಡಲು ಪ್ರಯತ್ನಿಸುತ್ತಿದೆ ಎಂದು ಅವರು ಮಾಹಿತಿ ನೀಡಿದರು. ವಿರೋಧ ಪಕ್ಷಗಳು ಹರಡುತ್ತಿರುವ ಪ್ರಚಾರಕ್ಕೆ ನಾಗರಿಕರು ಬಲಿಯಾಗುವುದಿಲ್ಲ ಎಂದು ಸಚಿವ ಯಾದವ್ ಆತ್ಮವಿಶ್ವಾಸ ವ್ಯಕ್ತಪಡಿಸಿದರು.

***************

ಕೇಂದ್ರ ಸಚಿವ ಸಂಪುಟವು 12 ಸಾವಿರದ 15 ಕೋಟಿ ರೂಪಾಯಿಗಳ ದೆಹಲಿ ಮೆಟ್ರೋದ 5ಎ ಹಂತಕ್ಕೆ ಅನುಮೋದನೆ ನೀಡಿದೆ.

ಸಂಪುಟ ಸಭೆಯ ನಂತರ ನವದೆಹಲಿಯಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಈ ಹಂತದಲ್ಲಿ, ಮೂರು ಮೆಟ್ರೋ ಕಾರಿಡಾರ್‌ಗಳು, ಆರ್ ಕೆ ಆಶ್ರಮದಿಂದ ಇಂದ್ರಪ್ರಸ್ಥ, ಏರೋಸಿಟಿಯಿಂದ ವಿಮಾನ ನಿಲ್ದಾಣ ಟರ್ಮಿನಲ್ 1, ಮತ್ತು ತುಘಲಕಾಬಾದ್‌ನಿಂದ ಕಾಳಿಂದಿ ಕುಂಜ್‌ವರೆಗಿನ ಕಾರಿಡಾರ್‌ಗಳಿಗೆ ಅನುಮೋದನೆ ನೀಡಲಾಗಿದೆ ಎಂದರು. 13 ಹೊಸ ಮೆಟ್ರೋ ನಿಲ್ದಾಣಗಳನ್ನು ಈ ಹಂತದಲ್ಲಿ

ನಿರ್ಮಿಸಲಾಗುವುದು. ಈ ವಿಸ್ತರಣೆಯೊಂದಿಗೆ, ದೆಹಲಿ ಮೆಟ್ರೋ ಜಾಲವು 400 ಕಿಲೋಮೀಟರ್‌ಗಳನ್ನು ದಾಟಲಿದೆ ಎಂದು ಅವರು ಹೇಳಿದರು.

ಕಳೆದ 11 ವರ್ಷಗಳಲ್ಲಿ, ಮೆಟ್ರೋ ವಲಯದಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಕಂಡುಬಂದಿದ್ದು, ಚೀನಾ ಮತ್ತು ಯುಎಸ್‌ಎ ನಂತರ ಭಾರತವು ವಿಶ್ವದ ಮೂರನೇ ಅತಿದೊಡ್ಡ ಮೆಟ್ರೋ ಜಾಲವನ್ನು ಹೊಂದಿದೆ ಎಂದು ಸಚಿವರು ತಿಳಿಸಿದರು. ಇಂದು ಅನುಮೋದಿಸಲಾದ ಹೊಸ ಕಾರಿಡಾರ್, ಸಂಪರ್ಕವನ್ನು ಹೆಚ್ಚಿಸುವುದರ ಜೊತೆಯಲ್ಲಿ, ರಸ್ತೆಗಳಲ್ಲಿನ ದಟ್ಟಣೆ ಕಡಿಮೆ ಮಾಡುತ್ತದೆ ಮತ್ತು ಗಾಳಿಯ ಗುಣಮಟ್ಟವನ್ನು ಸುಧಾರಿಸುತ್ತದೆ ಎಂದು ಅವರು ಮಾಹಿತಿ ನೀಡಿದರು.

***************

ಮಾಜಿ ಪ್ರಧಾನಿ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಅವರ ಜೀವನ ಮತ್ತು ಆದರ್ಶಗಳನ್ನು ಗೌರವಿಸಲು ಪ್ರಧಾನಿ ನರೇಂದ್ರ ಮೋದಿ ನಾಳೆ ಉತ್ತರ ಪ್ರದೇಶದ ಲಕ್ನೋದಲ್ಲಿ ರಾಷ್ಟ್ರ ಪ್ರೇರಣಾ ಸ್ಥಳವನ್ನು ಉದ್ಘಾಟಿಸಲಿದ್ದಾರೆ.

ಅಟಲ್ ಬಿಹಾರಿ ವಾಜಪೇಯಿ ಅವರ 101 ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಲಕ್ನೋಗೆ ಭೇಟಿ ನೀಡಲಿದ್ದಾರೆ. ಅಂದಾಜು 230 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ರಾಷ್ಟ್ರ ಪ್ರೇರಣಾ ಸ್ಥಳವನ್ನು ರಾಷ್ಟ್ರೀಯ ಸ್ಮಾರಕ ಮತ್ತು ಶಾಶ್ವತ ರಾಷ್ಟ್ರೀಯ ಮಹತ್ವದ ಸ್ಫೂರ್ತಿದಾಯಕ ಸಂಕೀರ್ಣವಾಗಿ ಅಭಿವೃದ್ಧಿಪಡಿಸಲಾಗಿದೆ. ರಾಷ್ಟ್ರ ಪ್ರೇರಣಾ ಸ್ಥಳದ ಉದ್ಘಾಟನೆಯು ನಿಸ್ವಾರ್ಥ ನಾಯಕತ್ವ ಮತ್ತು ಉತ್ತಮ ಆಡಳಿತದ ಆದರ್ಶಗಳನ್ನು ಸಂರಕ್ಷಿಸುವ ಮತ್ತು ಉತ್ತೇಜಿಸುವಲ್ಲಿ ಪ್ರಮುಖ ಹೆಜ್ಜೆಯಾಗಿದೆ.

***************

ಪಶುಸಂಗೋಪನೆ, ಕೃಷಿ ಮತ್ತು ಸಹಕಾರಿ ಸಂಸ್ಥೆಗಳು ಸಂಯೋಜನೆಯಾದರೆ ಸಹಕಾರದ ಮೂಲಕ ಸಮೃದ್ಧಿಯನ್ನು ಸಾಧಿಸಬಹುದಾಗಿದೆ ಎಂದು ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ.
ಹರಿಯಾಣದ ಪಂಚಕುಲದಲ್ಲಿಂದು ಕೃಷಿಕ ಭಾರತಿ ಸಹಕಾರ ಸಂಸ್ಥೆ ಆಯೋಜಿಸಿದ್ದ ರಾಷ್ಟ್ರೀಯ ಸಹಕಾರಿ ಸಮಾವೇಶದಲ್ಲಿ ಮಾತನಾಡಿದ ಅವರು, ರೈತರು ಸಹಕಾರಿ ಡೈರಿಗಳ ಮೂಲಕ ಹಾಲು ಮಾರಿದರೆ ಹೆಚ್ಚಿನ ಆದಾಯ ಗಳಿಸಬಹುದಾಗಿದೆ ಎಂದರು.
ದೇಶದ ಆಹಾರ ಭದ್ರತೆ ಮತ್ತು ಹಾಲು ಉತ್ಪಾದನೆಯಲ್ಲಿ ಹರಿಯಾಣ ಉತ್ತಮ ಕೊಡುಗೆ ನೀಡಿದ್ದು, ಹರಿಯಾಣದ ರೈತರು, ಸೈನಿಕರು ಮತ್ತು ಕ್ರೀಡಾಪಟುಗಳು ದೇಶ ಹೆಮ್ಮೆ ಪಡುವಂತೆ ಮಾಡಿದ್ದಾರೆ ಎಂದು ಹೇಳಿದರು.

***************

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕ್ರಿಸ್‌ಮಸ್ ಹಬ್ಬದ ಮುನ್ನಾದಿನವಾದ ಇಂದು ಜನತೆಗೆ ಶುಭಾಶಯ ಕೋರಿದ್ದಾರೆ.
ಕ್ರಿಸ್‌ಮಸ್ ಪ್ರೀತಿ ಮತ್ತು ಕರುಣೆಯ ಸಂದೇಶವನ್ನು ನೀಡುವ ಸಂತೋಷ ಮತ್ತು ಉತ್ಸಾಹದ ಹಬ್ಬವಾಗಿದೆ. ಮಾನವಕುಲದ ಕಲ್ಯಾಣಕ್ಕಾಗಿ ಭಗವಾನ್ ಯೇಸು ಕ್ರಿಸ್ತನು ಮಾಡಿದ ತ್ಯಾಗವನ್ನು ಇದು ಎಲ್ಲರಿಗೂ ನೆನಪಿಸುತ್ತದೆ ಎಂದು ಅವರು ಹೇಳಿದರು.
ಸಮಾಜದಲ್ಲಿ ಶಾಂತಿ, ಸಾಮರಸ್ಯ, ಸಮಾನತೆ ಮತ್ತು ಸೇವೆಯ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸಲು ಈ ಹಬ್ಬ ಪ್ರೇರೇಪಿಸುತ್ತದೆ.
ಯೇಸು ಕ್ರಿಸ್ತನು ತೋರಿದ ಮಾರ್ಗವನ್ನು ಅನುಸರಿಸಲು ಹಾಗೂ ದಯೆ ಮತ್ತು ಪರಸ್ಪರ ಸಾಮರಸ್ಯವನ್ನು ಉತ್ತೇಜಿಸುವ ಸಮಾಜವನ್ನು ನಿರ್ಮಿಸಲು ಈ ಸಂದರ್ಭದಲ್ಲಿ ಎಲ್ಲರೂ ಸಂಕಲ್ಪ ಮಾಡಬೇಕೆಂದು ಅವರು ಒತ್ತಾಯಿಸಿದರು.

***************

ಪಂಜಾಬ್ ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸರ್ಕಾರಿ ಆರೋಗ್ಯ ಸೌಲಭ್ಯಗಳಲ್ಲಿ, ತಂತ್ರಜ್ಞಾನ ಆಧಾರಿತ ಪರಿಹಾರಗಳ ರಾಜ್ಯಾದ್ಯಂತ ವಿಸ್ತರಣೆಯನ್ನು ರಾಜ್ಯ ಆರೋಗ್ಯ ಇಲಾಖೆ ಘೋಷಿಸಿದೆ.

ರಾಜ್ಯದಲ್ಲಿ ತಾಯಂದಿರ ಮರಣಗಳನ್ನು, ವಿಶೇಷವಾಗಿ ಪ್ರಸವಾನಂತರದ ರಕ್ತಸ್ರಾವದಿಂದ ಉಂಟಾಗುವ ಮರಣಗಳನ್ನು ತಡೆಯಲು ಪ್ರಾರಂಭಿಸಲಾದ ಪೈಲಟ್ ಹಂತದ ಯೋಜನೆಯ ಸಕಾರಾತ್ಮಕ ಫಲಿತಾಂಶಗಳನ್ನು ಪರಿಶೀಲಿಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

'ತಾಯಂದಿರ ಮರಣ ಕಡಿತಕ್ಕೆ ತಂತ್ರಜ್ಞಾನ ಹಸ್ತಕ್ಷೇಪಗಳು' ಎಂಬ ರಾಜ್ಯಮಟ್ಟದ ಕಾರ್ಯಾಗಾರವನ್ನು ಉದ್ದೇಶಿಸಿ, ನಿನ್ನೆ ಚಂಡೀಗಢದಲ್ಲಿ ಮಾತನಾಡಿದ ಪಂಜಾಬ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ. ಬಲ್ಬೀರ್ ಸಿಂಗ್,

ತಾಯಂದಿರ ಮರಣಗಳನ್ನು, ವಿಶೇಷವಾಗಿ ಪ್ರಸವಾನಂತರದ ರಕ್ತಸ್ರಾವದಿಂದ ಉಂಟಾಗುವ ಮರಣಗಳನ್ನು ನಿಗ್ರಹಿಸಲು ರಾಜ್ಯವು ಪ್ರತಿಯೊಂದು ಸಾಬೀತಾದ ತಾಂತ್ರಿಕ ಪರಿಹಾರವನ್ನು ಅಳವಡಿಸಿಕೊಳ್ಳಲಿದೆ ಎಂದು ಹೇಳಿದರು. ಪ್ರಸ್ತುತ ಪಂಜಾಬ್, ಒಂದು ಲಕ್ಷ ಜೀವಂತ ಜನನಗಳಿಗೆ 95 ತಾಯಂದಿರ ಮರಣ ದರವನ್ನು ದಾಖಲಿಸುತ್ತಿದೆ, ಇದು ರಾಷ್ಟ್ರೀಯ ಸರಾಸರಿ 88ಕ್ಕಿಂತ ಹೆಚ್ಚಾಗಿದೆ.

***************

ಬೆಂಗಳೂರಿನಲ್ಲಿ ಇಂದು ನಡೆದ ವಿಜಯ್ ಹಜಾರೆ ಕ್ರಿಕೆಟ್ ಟೂರ್ನಿಯಲ್ಲಿ ಆಂಧ್ರ ಪ್ರದೇಶ ವಿರುದ್ಧ ದೆಹಲಿ ತಂಡವು 4 ವಿಕೆಟ್‌ಗಳಿಂದ ಜಯ ಗಳಿಸಿದೆ.

ವಿರಾಟ್ ಕೊಹ್ಲಿ ಅವರ ಶತಕದ ನೆರವಿನಿಂದ ದೆಹಲಿ ತಂಡವು 37.4 ಓವರ್‌ಗಳಲ್ಲಿ 299 ರನ್‌ಗಳ ಗುರಿ ಬೆನ್ನಟ್ಟಿ ಜಯ ತನ್ನದಾಗಿಸಿಕೊಂಡಿತು.

ಜೈಪುರದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಮುಂಬೈ ತಂಡವು ಸಿಕ್ಕಿಂ ವಿರುದ್ಧ 8 ವಿಕೆಟ್‌ಗಳಿಂದ ಜಯ ಗಳಿಸಿದೆ. ಮುಂಬೈ ಪರ ರೋಹಿತ್ ಶರ್ಮಾ 155 ರನ್ ಗಳಿಸಿ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಹಮದಾಬಾದ್‌ನಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿಯಲ್ಲಿ ಜಾರ್ಖಂಡ್ ವಿರುದ್ಧ ಕರ್ನಾಟಕ 5 ವಿಕೆಟ್‌ಗಳ ರೋಚಕ ಜಯಗಳಿಸಿದೆ. ಜಾರ್ಖಂಡ್ ನೀಡಿದ 412 ರನ್ ಗುರಿ ಬೆನ್ನತ್ತಿದ ಕರ್ನಾಟಕ ದೇವದತ್ ಪಡಿಕಲ್ ಅವರ 147 ರನ್ ಮತ್ತು ನಾಯಕ ಮಯಾಂಕ್ ಅಗರ್ವಾಲ್, ಅರ್ಧ ಶತಕದ ನೆರವಿನಿಂದ ಗುರಿ ತಲುಪಿತು.

***************

ವಿಕಸನಗೊಳ್ಳುತ್ತಿರುವ ಭೌಗೋಳಿಕ ರಾಜಕೀಯ ಪರಿಸರ ಮತ್ತು ಉದಯೋನ್ಮುಖ ಭದ್ರತಾ ಸವಾಲುಗಳು– ತ್ವರಿತ, ಚುರುಕಾದ ಮತ್ತು ಹೆಚ್ಚು ನಿಖರವಾದ ಪ್ರತಿಕ್ರಿಯೆಯನ್ನು ಬಯಸುತ್ತವೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ರಾಷ್ಟ್ರಪತಿ ಭವನದಲ್ಲಿ ಇಂದು ಭಾರತೀಯ ರಕ್ಷಣಾ ಖಾತೆ ಸೇವೆಯ, 2024ರ ಬ್ಯಾಚ್‌ನ ಪ್ರೊಬೇಷನರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಸ್ಥಳೀಯ ಉತ್ಪಾದನೆಯನ್ನು ಪ್ರೋತ್ಸಾಹಿಸುವ, ಸ್ಥಳೀಯ ಪೂರೈಕೆ ಸರಪಳಿಗಳನ್ನು ಬಲಪಡಿಸುವ ಮತ್ತು ದೇಶೀಯ ಉದ್ಯಮವನ್ನು ಉತ್ತೇಜಿಸುವ ಮೂಲಕ ಸರ್ಕಾರದ ಮಹತ್ವಾಕಾಂಕ್ಷೆಯ ಆತ್ಮನಿರ್ಭರ ಭಾರತ ಅಭಿಯಾನವನ್ನು ಸಕ್ರಿಯವಾಗಿ ಬೆಂಬಲಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಭಾರತೀಯ ಸಶಸ್ತ್ರ ಪಡೆಗಳು ಮತ್ತು ಮಿತ್ರ ಸಂಸ್ಥೆಗಳ ಹಣಕಾಸು ಸಂಪನ್ಮೂಲಗಳ ನಿರ್ವಹಣೆಯಲ್ಲಿ ಭಾರತೀಯ ರಕ್ಷಣಾ ಖಾತೆ ಸೇವೆಯು ಪ್ರಮುಖ ಸ್ಥಾನವನ್ನು ಹೊಂದಿದೆ ಎಂದ ಅವರು, ರಕ್ಷಣಾ ಇಲಾಖೆಯು ನಿರಂತರವಾಗಿ ಹೊಂದಿಕೊಳ್ಳುವಿಕೆ, ನಾವೀನ್ಯತೆ ಮತ್ತು ಆಧುನೀಕರಿಸುವತ್ತ ಗಮನ ಹರಿಸಬೇಕು ಎಂದರು.

***************

ಇಂದು ರಾಷ್ಟ್ರೀಯ ಗ್ರಾಹಕರ ದಿನ. 'ಡಿಜಿಟಲ್ ಮಾಧ್ಯಮದ ಮೂಲಕ ದಕ್ಷ ಹಾಗೂ ತ್ವರಿತ ನ್ಯಾಯ ವಿಲೇವಾರಿಗೆ ಆದ್ಯತೆ' ಎಂಬ ಧ್ಯೇಯ ವಾಕ್ಯದೊಂದಿಗೆ ರಾಷ್ಟ್ರೀಯ ಗ್ರಾಹಕರ ದಿನ ಆಚರಿಸಲಾಗುತ್ತಿದೆ.

ಗ್ರಾಹಕ ಹಕ್ಕುಗಳ ಮಹತ್ವ ಮತ್ತು ಗ್ರಾಹಕ ರಕ್ಷಣೆಯ ಕುರಿತು ಜಾಗೃತಿ ಮೂಡಿಸಲು ಪ್ರತಿ ವರ್ಷ ಡಿಸೆಂಬರ್ 24 ರಂದು ರಾಷ್ಟ್ರೀಯ ಗ್ರಾಹಕರ ದಿನ ಆಚರಿಸಲಾಗುತ್ತಿದೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಸಾಮಾಜಿಕ ಜಾಲತಾಣದಲ್ಲಿ, ಗ್ರಾಹಕ ದಿನದಂದು ತಮ್ಮ ಹಕ್ಕುಗಳ ಕುರಿತು ಜಾಗೃತರಾಗಲು ಗ್ರಾಹಕರಿಗೆ ಕರೆ ನೀಡಿದ್ದಾರೆ. ಪ್ರತಿಯೊಬ್ಬ ಗ್ರಾಹಕರೂ ಸುರಕ್ಷತೆ, ಮಾಹಿತಿ, ಆಯ್ಕೆ ಮತ್ತು ಪರಿಹಾರದ ತಮ್ಮ ಹಕ್ಕುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಮತ್ತು ಅವುಗಳ ರಕ್ಷಣೆ ಮಾಡಬೇಕು ಎಂದು ಅವರು ಹೇಳಿದ್ದಾರೆ.

*******ಮುಕ್ತಾಯ********